ಸಾಕ್ಷಿಯನ್ನು ದಿನಾಂಕಃ **18.02.2022** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮು. ಪಾಟೀ ಸವಾಲುಃ ಶ್ರೀ. ಎಂ ಜೆ ಎಸ್ ವಕೀಲರಿಂದಃ-

ನಿಪಿ 9 ಪರಿವರ್ತನಾ ಪತ್ರ ಕೊಟ್ಟಿರುವ ಬಗ್ಗೆ ನನಗೆ ತಿಳುವಳಿಕೆ ಇದೆ. ಸದರಿ ಪರಿವರ್ತನಾ ಪತ್ರದಲ್ಲಿ ಸೇರಿಕೊಂಡುವಂತಹ ಸರ್ವೆ ನಂ. 468 ಮತ್ತು 360 ಎಂದರೆ ಹೌದು. ಸದರಿ ದಾವಾ ಹಾಕಿರುವುದು ಸರ್ವೆ ನಂ. 451/2 ಕ್ಕೆ ಎಂದರೆ ಹೌದು. ನಿಪಿ-9 ಪರಿವರ್ತನಾ ಪತ್ರವನ್ನು ಸಿದ್ದಮಲ್ಲಯ್ಯನ ವಾರಸುದಾರರೆಂದು ತೋರಿಸಲು ಕೊಟ್ಟಿರುತ್ತೇನೆ ಚಿಕ್ಕಸ್ವಾಮಿಯವರು ಸರ್ವೆ ನಂ. 468 ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದು ತೋರಿಸಲು ನಿಪಿ 10 ದಾಖಲೆಯನ್ನು ಕೊಟ್ಟಿರುತ್ತೇನೆ.

ನಿಪಿ 11 ನಮೂನೆ 10 ಅಸಲು ಪತ್ರವನ್ನು ಕೊಟ್ಟಿರುವುದಿಲ್ಲ ತಹಶೀಲ್ದಾರ್ ರವರಿಂದ ಕಾಪಿ ತೆಗೆದುಕೊಂಡಿರುತ್ತೇನೆ ಎಂದರೆ ಹೌದು. ಸರ್ವೆ ನಂ. 451/2 ರ ಮಂಜೂರಾಗಿರುವಂತಹ ಅಸಲು ಪತ್ರ ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಎಷ್ಟು ಸರ್ಕಾರಕ್ಕೆ ಹಣವನ್ನು ಕೊಟ್ಟಿರುತ್ತೇವೆ ಎಂದು ನೆನಪು ಇರುವುದಿಲ್ಲ. ಹಣವನ್ನು ಪಾವತಿ ಮಾಡಿರುವಂತಹ ರಶೀದಿ ಏನಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸಿದ್ದಮಲ್ಲಪ್ಪನವರ ಹೆಸರಿಗೆ ಲ್ಯಾಂಡ್ ಟ್ರಿಬುನಲ್ ಯಿಂದ ಆದೇಶವಾಗಿರುವಂತಹ ಆದೇಶ ಪತ್ರವನ್ನು ನ್ಯಾಯಾಲಯಕ್ಕೆ ಕೊಡಲು ಯಾವುದೇ ತೊಂದರೆ ಇರುವುದಿಲ್ಲ. ನಿಪಿ 11 ರಲ್ಲಿ ಕಾಣಿಸಿಕೊಂಡಿರುವಂತಹ ಸಿದ್ದಮಲ್ಲು ನಮ್ಮ ತಾತ ಸಿದ್ದಮಲ್ಲು ಬೇರೆ ಬೇರೆ ಎಂದರೆ ಹೌದು. ನಿಪಿ 12 ರಿಂದ 14 ಆಗಿರುವಂತಹ ದಾಖಲೆಗಳು ಸರ್ವೆಯರ್ ನಿಂದ ಆದಂತಹ ದಾಖಲೆಗಳು ಎಂದರೆ ಹೌದು. ಸರ್ವೆ ಮಾಡಿ ತಹಶೀಲ್ದಾರ್ ರವರು ಮುಂದಕ್ಕೆ ಹೋಗಿ ಎಂದು ಆದೇಶ ಮಾಡಿರುತ್ತಾರೆ. ಅಂತಹ ಆದೇಶ ಮಾಡಿರುವಂತಹ ಆದೇಶವನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ. ಅಳತೆ ಮಾಡಿರುವಂತಹ ಸಂದರ್ಭ ಅಕ್ಕ ಪಕ್ಕ ಜಮೀನಿನವರಿಗೆ ನೋಟಿಸ್ ಜಾರಿ ಮಾಡಿರುತ್ತೇವೆ. ನಿಪಿ 12 ರಲ್ಲಿ ಸಹಿ ಮಾಡಿರುವಂತಹ ಸಾಕ್ಷ್ಯದಾರರು ಅಕ್ಕ ಪಕ್ಕದವರಲ್ಲ ಎಂದರೆ ಸರಿಯಲ್ಲ. ನಮ್ಮ ಅಕ್ಕ ಪಕ್ಕದ ಜಮೀನಿನಲ್ಲಿ ಪ್ರತಿವಾದಿಗಳ ಜಮೀನು ಇರುತ್ತದೆ. ನಿಪಿ 19 ಕಂದಾಯ ರಶೀದಿ 2011 ರ ರಶೀದಿ ಎಂದರೆ ಹೌದು. ಈ ದಾವೆ ಹಾಕಿರುವುದು 2015 ರಲ್ಲಿ ಎಂದರೆ ಸರಿ. ಕಂದಾಯ ರಶೀದಿಯಲ್ಲಿ ನಂಜುಂಡ ಸ್ವಾಮಿ ಬಿನ್ ಸಿದ್ದಮಲ್ಲಪ್ಪ ರವರಿಂದ ಕಂದಾಯ ಪಾವತಿ ಮಾಡಿರುವುದು ಎಂದು ಇರುತ್ತದೆ ಎಂದರೆ ಸರಿ, ಅದು ಬೇರೆ ಜಮೀನಾಗಿರುತ್ತದೆ.

1 ನೇ ಪ್ರತಿವಾದಿ ತಂದೆಯ ಹೆಸರು ಸಿದ್ದಮಲ್ಲಯ್ಯ ಎಂದರೆ ಅವರ ತಂದೆ ಸಿದ್ದಮಲ್ಲಯ್ಯ ಅಲ್ಲ ಸಿದ್ದಮಲ್ಲಪ್ಪ ಆಗಿರುತ್ತದೆ. ನಮ್ಮ ತಂದೆಯ ಹೆಸರು ಸಿದ್ದಮಲ್ಲಪ್ಪ ಆಗಿರುತ್ತದೆ. ನಿಪಿ 20 ಇಂಡೆಕ್ಸ್ ಆಫ್ ಲ್ಯಾಂಡ್ ಎಂ ಎಸ್ ನಂಜಪ್ಪ ಬಿನ್ ಸಿದ್ದ ಮಲ್ಲಯ್ಯ ಎಂದು ಇರುತ್ತದೆ ಎಂದರೆ ಸರಿಯಲ್ಲ, ಮುಂದುವರೆದು ಆದರೆ ಅದು ನಮ್ಮದಾಗಿರುತ್ತದೆ. ನಿಪಿ 21 ರಲ್ಲಿ ಎಂಟ್ರಿ ನಂಬರ್ 7057 ರಲ್ಲಿ ಹದಿನಾರು ಗ್ರಾಮದ ಎಂ ಎಸ್ ನಂಜಪ್ಪ ಬಿನ್ ಸಿದ್ದಮಲ್ಲಪ್ಪನವರಿಂದ ಹದಿನಾರು ಗ್ರಾಮ

ಕಾವೇರಿ ಗ್ರಾಮೀಣ ಬ್ಯಾಂಕ್ ಗೆ ಆಧಾರ ರೂ. 4000 ಇರುತ್ತದೆ ಎಂದರೆ ಅದು ಅವರು ಸೃಷ್ಟಿ ಮಾಡಿಕೊಂಡಿರುತ್ತಾರೆ.

ನಿಪಿ 22 ಆರ್ ಟಿ ಸಿ ಸರ್ವೆ ನಂ. 451/1 ರಲ್ಲಿ ನಂಜಪ್ಪ ಬಿನ್ ಗಿರಿಮಲ್ಲಯ್ಯ ಎಂದು ಇರುತ್ತದೆ ಎಂದರೆ ಹೌದು. ಇದರಲ್ಲಿ ನಂಜಪ್ಪ ಬಿನ್ ಗಿರಿಮಲ್ಲಯ್ಯ ಯಾರು ಎಂದರೆ ಗೊತ್ತಿಲ್ಲ.

ದಾವಾ ಆಸ್ತಿಗೆ ನಾವು ಕೊನೆಯ ಬಾರಿ ಕಂದಾಯ ಯಾವಾಗ ಪಾವತಿ ಮಾಡಿರುತ್ತೇವೆ ಎಂದು ಗೊತ್ತಿಲ್ಲ. ನಿಡಿ 1 ರ ಪ್ರಕಾರ ಕೊನೆಯದಾಗ 1 ನೇ ಪ್ರತಿವಾದಿ ನಂಜುಂಡಸ್ವಾಮಿಯವರೇ ದಾವಾ ಸ್ವತ್ತಿಗೆ ಕಂದಾಯ ಪಾವತಿ ಮಾಡಿರುವುದು ಎಂದರೆ ಗೊತ್ತಿಲ್ಲ. 2019 -20 ನೇ ಸಾಲಿನ ದಾವಾ ಸ್ವತ್ತಿನ ಪಹಣಿಯ ಕಲಂ ನಂ. 9 ಮತ್ತು 12 ರಲ್ಲಿ ನಂಜಪ್ಪ ಬಿನ್ ಸಿದ್ದಮಲ್ಲಯ್ಯ ಎಂದು ನಮೂದನೆಯಾಗಿರುತ್ತದೆ ಎಂದರೆ ಸರಿಯಲ್ಲ, ಮುಂದುವರೆದು ಅವರಿಗೆ ಸೇರಿದ್ದಲ್ಲ. ನಿಡಿ 4 ಮುಟೇಷನ್ ಪ್ರತಿಯ ಪ್ರಕಾರ 1995-96 ನೇ ಸಾಲಿನಲ್ಲಿ ನಂಜುಂಡಸ್ವಾಮಿಯವರ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

**ಮರುವಿಚಾರಣೆಃ ಇಲ್ಲ.**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಒ

ಸಹಿ/-
ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,
ನಂಜನಗೂಡು